ಮನೆಗಳ ರಚನೆಯ ಕಾರ್ಯ ನಡೆಯುತ್ತಾ ಇದೆ. ಅಲ್ಲಿ ಕೇವಲ ಒಬ್ಬರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಇಬ್ಬರು ಅಸಿಸ್ಟೆಂಟ್ ಇಂಜಿನೀಯರ್‌ಗಳು ಇದ್ದಾರೆ. ಅಲ್ಲಿ ಸಿಬ್ಬಂದಿ ಕೊರತೆಯಿ ಅಲ್ಲಿ ಎದ್ದು ಕಾಣುತ್ತದೆ. ಅಂಥ ಪ್ರದೇಶದಲ್ಲಿ ಹೆಚ್ಚಿಗೆ ಸಿಬ್ಬಂದಿ ಇದ್ದರೆ ಮನೆಗಳನ್ನು ಕಟ್ಟುವಂಥ ಕಾಲದಲ್ಲಿ ನಿಗಾ ವಹಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿರುವುದೇನೆಂದರೆ, ತಾವು ಕೂಡಲೇ ಆ ಮನೆಗಳನ್ನು ಕಟ್ಟುವುದನ್ನು ನಿಲ್ಲಿಸ ಬೇಕು. ತಜ್ಞರ ವರದಿಯು ಬರಲಿ.' ಅಂತೆಯೇ ತಾವುಗಳು ವಿಚಾರಣೆಗೆ ಕಾರವಾರಕ್ಕೆ ಅಧಿಕಾರಿಗಳನ್ನು ಕಳುಹಿಸಿದಾಗ ಅವರು ಬೀಳುವಂಥ ಮನೆಗಳಿಗೆ ಸಿಮೆಂಟ್ ಪ್ಲಾಸ್ಟರ್ ಮಾಡಿ ಎಂದು ಹೇಳಿದ್ದಾರೆ. ಇಂಥ ತಾತ್ಕಾಲಿಕ ಪರಿಹಾರವನ್ನು ಮಾಡುವುದರಿಂದ ಏನು ಪ್ರಯೋಜನ ಬಂತು ? ಶಾಶ್ವತವಾಗಿ ಗಟ್ಟಿಯಾಗಿ ಉಳಿಯುವಂಥ ಕಾರ್ಯವನ್ನು ಅಲ್ಲಿ ಮಾಡಬೇಕು. ಸಿಮೆಂಟ್ ಪ್ಲಾಸ್ಟರ್ ಮಾಡಿ ಮುಗಿಸುವುದರಿಂದ ಆ ಮನೆಗಳ ಸಮಸ್ಯೆಯು ಬಗೆಹರಿಯುವುದಿಲ್ಲ. ಏಕೆಂದರೆ ಈ ನಕ್ಷೆಯನ್ನು ತಯಾರು ಮಾಡಿದಾಗಲೇ ಸರ್ವಜನಿಕರು ಕೂಡ ಬಹಳಷ್ಟು ದೂರುಗಳನ್ನು ಸರಕಾರಕ್ಕೆ ಕೊಟ್ಟಿದ್ದಾರೆ.

ಉಪಾಧ್ಯಕ್ಷೆಯವರು.—ತಾವುಗಳು ಈಗಾಗಲೇ ೧೦ ನಿಮಿಷಗಳನ್ನು ತೆಗೆದುಕೊಂಡಿದ್ದೀರಿ.

ಶ್ರೀ ಪ್ರಭಾಕರ ಎಸ್. ರಾಣೆ.—ಇವೊತ್ತು ಕಾರವಾರ ಪ್ರದೇಶದಲ್ಲಿ ಕಟ್ಟಿದಂಥ ಮನೆಗಳು ಜನರ ವಾಸ ಯೋಗ್ಯಮನೆಗಳಾಗಿರದೆ ಜನರನ್ನು ಜೀವಂತವಾಗಿ ಹುಗಿಯುವ ಗೋರಿಗಳಾಗುತ್ತವೆ ಎಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಗೃಹ ನಿರ್ಮಾಣ ಮಂಡಳಿಯಂ ಕಟ್ಟಡಗಳ ಬಗ್ಗೆ ವಹಾನ್ ಸದಸ್ಯರು ಎಚ್ಚರಿಕೆ ನೀಡಿದ್ದನ್ನು ಸರಕಾರ ಗಮನಿಸುತ್ತದೆ. ಮಾನ್ಯ ಸದಸ್ಯರು ಆ ಪ್ರದೇಶಕ್ಕೆ ಹೆಚ್ಚಿಗೆ ಸಿಬ್ಬಂದಿಯ ಅವಶ್ಯಕತೆ ಇದೆ ಎಂದು ಹೇಳಿದ್ದುದು ನನಗೆ ಮನವರಿಕೆಯಾಗಿದೆ. ಅಲ್ಲಿಗೆ ಹೆಚ್ಚಿಗೆ ಸಿಬ್ಬಂದಿಯನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಆ ೩೦ ಮನೆಗಳು ಯಾವ ಹಂತದಲ್ಲಿ ಕುಸಿದಿದೆಯೋ ಅವುಗಳನ್ನು ಹೇಗಿದೆಯೋ ಹಾಗೆಯೇ ಇಟ್ಟು ತಜ್ಞರ ಸಮಿತಿಯಂ ಅಲ್ಲಿಗೆ ಬರುವವರೆಗೆ ಹಾಗೆಯೇ ಇಟ್ಟು ಅವರು ಅಲ್ಲಿಗೆ ಹೋಗಿ ಪರಿಶೀಲಿಸಿ ಸವಿಕ್ಷಾಕ್ಷೆ ಮಾಡುವುದಕ್ಕೆ ಮತ್ತು ಅವರ ಅಭಿಪ್ರಾಯಗಳನ್ನು ಕೊಡುವುದಕ್ಕೆ ಅನುಕೂಲವಾಗುವಂತೆ ಯಾವುದೇ ಕಾಮಗಾರಿಗಳನ್ನು ಮಾಡದೇನೆ ಹಾಗೆಯೇ ಇರಿಸಬೇಕೆಂದು ಆದೇಶ ಕೊಟ್ಟಿದ್ದೇನೆ. ಈ ೩೦ ಮನೆಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ತಜ್ಞರ ಸಮಿತಿಯು ಬರುವವರೆಗೆ ಕೆಲಸವನ್ನು ನಿಲ್ಲಿಸುತ್ತಾರೆ. ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನ ಆಗಿದೆ ಎಂದು ಭಾವಿಸುತ್ತೇನೆ.

ಶ್ರೀ ಕೆ. ಹೆಚ್. ಗೌಡ.—ಕಾರವಾರದಲ್ಲಿ ಗೃಹ ನಿರ್ಮಾಣ ಮಂಡಳಿಯವರು ಕಟ್ಟಿದಂಥ ಮನೆಗಳ ಪೈಕಿ ೩೦ ಮನೆಗಳು ಕುಸಿದು ಬಿದ್ದಿವೆ. ಕೆಲವು ಕುಸಿದು ಬೀಳುವ ಹಂತಕ್ಕೆ ಬಂದಿವೆ. ಇನ್ನು ಮುಂದೆ ಕೂಡ ಇದೇ ರೀತಿಯ ಕಳಪೆ ಕಾಮಗಾರಿಗಳು ಮುಂದುವರಿದರೆ ಅಲ್ಲಿ ಇದರಿಂದಾಗಿ ಅನೇಕ ಸಾವು ನೋವುಗಳು ಸಂಭವಿಸಬಹುದು. ಆದುದರಿಂದ ಮುಂದು ಆಗಬಹುದಾದಂಥ ಅನಾಹುತಗಳನ್ನು ತಪ್ಪಿಸುವುದಕ್ಕೋಸ್ಕರವಾಗಿ ಆ ಕಳಪೆ ಕಾಮಗಾರಿಗಳನ್ನು ಅದೇ ಹಂತದಲ್ಲಿ ನಿಲ್ಲಿಸಿ ವಿಚಾರಣೆ ನಡೆಸ ಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರಾದ ಪ್ರಭಾಕರ ರಾಣೆಯವರಿಗೆ ಹೇಳಿದ ಉತ್ತರ ಇವರಿಗೂ ಅನ್ವಯಿಸುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಇವರಿಗೆ ಉತ್ತರ ಹೇಳುವ ಅವಶ್ಯಕತೆ ಇಲ್ಲ.

PAPERS LAID ON THE TABLE OF THE HOUSE

SIR B. SHIVANNA (Minister for Social welfare).—Madam Deputy Speaker, I beg to place on the Table of the House,

"III Report of the Commission on Backward Classes".

MADAM DY. SPEAKER.—Report laid. The Hon. Members are requested to collect the copy of the Report from the Notice Officer